** Establishment of Oil Refinery in the State*

587. SRI K. R. SRINIVASULU NAYUDU (Shanthinagar).—
Will the minister for Industries and Parliamentary Affairs be pleased to state,

(*a*) Whether the Government is aware that most of the states having coastal line have refineries if so, the steps the Government proposes to take.

(*b* Whether any steps have been taken by the Government to persuade the Central Government to start a refinery in the state?

SRI S. M. KRISHNA.—(Minister for Industries and Parliamentary Affairs)

(*a*) and (*b*) Yes. The state Government have already approached the Government of India in the matter of establishment of an oil refinery in Karnataka. Based however, on technoeconomic feasibility studies made by the Government of India for establishing additional refi ery capacity on the West Coast, the Government of India have come to the conclusion that there would, at present, be no need for having a refinery on the Karnataka State's West Coast. The Government of India have advised that this question may be taken up when the sixth plan projects would be under formulation.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು.—

ಸ್ವಾಮಿ ನನ್ನ (ಅ) ಮತ್ತು (ಆ) ಪ್ರಶ್ನೆ ಗೊತ್ತಿದೆ ಎಂದು ಹೇಳಿದ್ದೀರಿ ಹೀಗಿರುವಾಗ ದಕ್ಷಿಣ ದಲ್ಲಿ ಅಂದರೆ ಮಹಾರಾಷ್ಟ್ರ, ಆಂಧ್ರಪ್ರದೇಶ, ತಮಿಳುನಾಡು ಮತ್ತು ಕೇರಳದಲ್ಲಿ ಆಯಿಲ್ ರಿಫೈನರೀಸ್ ಇರುವುದರಿಂದ ಕರ್ನಾಟಕ ರಾಜ್ಯದ ಪಶ್ಚಿಮ ಕರಾವಳಿ ಪ್ರದೇಶದಲ್ಲಿ ಶೋಧಾಗಾರ ಕಾರ್ಖಾನೆಯನ್ನು ಸಧ್ಯಕ್ಕೆ ಹೊಂದುವ ಅಗತ್ಯವಿಲ್ಲ ಆದರೂ ಸಹ ೬ನೇ ಪಂಚವಾರ್ಷಿಕ ಯೋಜನೆ ಯಲ್ಲಿ ಹಾಕಿಕೊಳ್ಳುತ್ತೇವೆಂದು ತಿಳಿಸಿದ್ದೀರಿ. ಇದಕ್ಕೆ ಬೇರೆ ಏನಾದರೂ ಕಾರಣಗಳು ಇದ್ದರೆ ಆ ವಿವರಗಳನ್ನು ಹೇಳುತ್ತೀರಾ?

† ಶ್ರೀ ಎಸ್. ಎಂ. ಕೃಷ್ಣ.—ಆಯಿಲ್ ರಿಫೈನರೀಸ್‌ನ್ನು ಹಾಕಬೇಕಾದರೆ ರಾಜ್ಯ ರಾಜ್ಯ ಹಾಗೆಂದು ಹೇಳಿ ವಿಂಗಡಿಸಿಕೊಂಡು ಹೋಗುವುದಕ್ಕೆ ಸಾಧ್ಯವಾಗುವುದಿಲ್ಲ. ಇಡೀ ರಾಷ್ಟ್ರದ ದೃಷ್ಟಿ ಯಿಂದ ನೋಡಬೇಕಾಗುತ್ತದೆ. ಟೆಕ್ನೊ ಎಕನಾಮಿಕ್ ಫೀಜಬಲಿಟಿ ಇದಕ್ಕೆ ಆದ್ಯತೆ ಕೊಡಬೇಕಾಗುತ್ತದೆ ಮತ್ತು ಒಂದು ರಿಫೈನರೀಸ್‌ಂದ ಇನ್ನೊಂದು ರಿಫೈನರೀಸ್‌ಗೆ ಇಷ್ಟು ದೂರವಿರಬೇಕೆಂದು ಇದೆ. ಇದು ಇಷ್ಟು ಹತ್ತಿರದಲ್ಲಿರತಕ್ಕಂಥ ಆಯಿಲ್ ರಿಫೈನರಿ ಆಗುವುದರಿಂದ ಅದರ ಸಂಪೂರ್ಣ ಕ್ಯಾಪ್ಯಾಸಿಟಿಯನ್ನು ಕೂಡ ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಇದನ್ನೆಲ್ಲಾ ಕೇಂದ್ರಸರ್ಕಾರದವರು ಗಮನದಲ್ಲಿಟ್ಟುಕೊಂಡು ಒಂದು ನಿರ್ಣಯಕ್ಕೆ ಬಂದಿದ್ದಾರೆ. ಆದಾಗ್ಯೂ ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರದವರು ಆಗಿಂದಾಗ್ಗೆ ಅತ್ಯಂತ ಆಗ್ರಹಪೂರ್ವಕವಾಗಿ ನಾವು ನಮ್ಮ ರಾಜ್ಯದಲ್ಲಿ ಇದು ಒಂದು ವಿಶೇಷವಾದಂಥ ಕೊರತೆ ಇದೆ, ಈ ಕೊರತೆಯನ್ನು ನೀಗಲಾಡಿಸುವುದಕ್ಕೆ ಹಾಗೂ ಈಗ ಕಂದುರೆಮುಖ ಓರ್ ಡೆವಲಪ್‌ಮೆಂಟ್ ಆಗುತ್ತಾ ಇರುವುದರಿಂದ ಮತ್ತು ಮಂಗಳೂರು ಬಂದರು ಆಗಿರುವುದರಿಂದ ಈ ಎಲ್ಲಾ ಕಾರಣಗಳಿ ರುವುದರಿಂದ ಕೇಂದ್ರ ಸರ್ಕಾರಕ್ಕೆ ಮತ್ತೊಮ್ಮೆ ನಮ್ಮ ರಾಜ್ಯಕ್ಕೆ ಆಯಿಲ್ ರಿಫೈನರಿ ಬೇಕೆಂದು ಪ್ರತಿಪಾದನೆ ಮಾಡುತ್ತೇವೆ.

ಶ್ರೀ ಕೆ ಆರ್. ಶ್ರೀನಿವಾಸಲುನಾಯ್ಡು.—ತಾವೇ ಒಪ್ಪಿಕೊಂಡಿರಿ ಎರಡುತಿಂಗಳ ಹಿಂದೆ ಮಂಗಳೂರು ಬಂದರಿಗೆ ಕಮಿಷನ್ ಆಗಿರುವುದು ಎಂದು. ಕಾಳಿನದಿಗೆ ದುಡ್ಡು ಕೊಡುವುದಕೆ, ಹಿಂದೆಮುಂದೆ ನೋಡಿದರು. ಕೇಂದ್ರದಲ್ಲಿ ಪ್ರಭಾವ ಕಡಿಮೆ ಆಗಿದೆ ಎಂದು ಕಾಣುತ್ತೆ. ಈ ಪಂಚವಾರ್ಷಿಕ ಯೋಜನೆಯಲ್ಲಿ ಹಾಕಬೇಕು ಎಂದು ಕೇಳಿಕೊಳ್ಳುವುದು.

ಶ್ರೀ ಎಸ್. ಎಂ. ಕೃಷ್ಣ.—ಕೇಂದ್ರದಮೇಲೆ ನಮ್ಮ ಪ್ರಭಾವ ಕಡಿಮೆಯಾಗಿದೆ ಎಂದು ಹೇಳಲಿಕ್ಕೆ ನಾನು ಸಿದ್ಧವಾಗಿಲ್ಲ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ಇಂದೂ ಕೂಡ ಕೇಂದ್ರದ ಮೇಲೆ ಇಷ್ಟು ಪ್ರಭಾವ ತರತಕ್ಕ ಸರ್ಕಾರ ಹಿಂದೆ ಇರಲಿಲ್ಲ ಎಂದು ಹೇಳುತ್ತೇನೆ.

**Repairs of Low Level and High Level Canal of T. B. Project*

668 SRI B. SATHYANARAYANA SINGH.—(Hospet)

Will the Chief Minister be pleased to state.—

(*a*) whether tenders were called in respect of works relating to the repairs of low level canal, and high level canal of T. B. Project

(*b*) if so, whether the work relating to the acceptance of tender has been finalised.

(*c*) if not, the reasons for the same?

SRI SUBASH ASTURE.—(Minister of State for Major and Medium Irrigation) (on behalf of)

SRI D. DEVARAJ URS.—(Chief Minister)

(*a*) Yes

(*b*) Tenders received in connection with canal repair work were rejected. However two tenders for work relating to the construction of sheds for health and other T. B. Board Mazdoors have been accepted and finalised.

(*c*) The other tenders in respect of improvements and extensions of power canal, low level canal and high level canal, were cancelled as no grants were available.

ಶ್ರೀ ಬಿ. ಸತ್ಯನಾರಾಯಣ ಸಿಂಗ್.—ಸ್ವಾಮಿ, ಟೆಂಡರ್‌ಗಳನ್ನೆಲ್ಲಾ ಗ್ರಾಂಡ್ ಇಲ್ಲದಿರುವುದಕ್ಕೆ ಕ್ಯಾನ್‌ಸಲ್ ಮಾಡಿದ್ದೇವೆ ಎಂದು ಹೇಳಿದಿರಿ. ಗ್ರಾಂಟ್ ಇಲ್ಲದ್ದು ಯಾವಾಗ ತಿಳಿಯಿತು, ಗ್ರಾಂಟ್ ಇಲ್ಲದೇ ಇದ್ದರೂ ಎರಡೆರಡು ಸಾರಿ ಟೆಂಡರ್ ಕರೆದ ಉದ್ದೇಶ ಏನು?

† ಶ್ರೀ ಶುಭಾಷ್ ಅಸ್ತೂರೆ.—ಮೊಟ್ಟಮೊದಲನೆಯದಾಗಿ ಬೋರ್ಡ್ ಆಕ್ಟಿವಿಟೀಸ್ ನವಂಗೆ ಸಂಬಂಧಪಟ್ಟದ್ದು ಅಲ್ಲ. ಏತಕ್ಕೆ ಕರೆದರು ಎಂದು ನಿರ್ದಿಷ್ಟವಾಗಿ ಕೇಳಿದರೆ ಇನ್‌ಫರ್‌ಮೇಷನ್ ತೆಗೆದುಕೊಂಡು ತಿಳಿಸುತ್ತೇನೆ. ಸದ್ಯಕ್ಕೆ ಬೋರ್ಡಿನವರಂ ಇನ್‌ಫರ್‌ಮೇಷನ್ ಏನು ಕೊಟ್ಟಿಲ್ಲ. ಫಂಡ್ಸ್ ಇರಲಿಲ್ಲ, ಅದಕೋಸ್ಕರ ಟೆಂಡರ್‌ಗಳನ್ನು ರಿಜೆಕ್ಟ್ ಮಾಡಿದ್ದಾರೆ ಎಂದು ಹೇಳಿದ್ದೇವೆ.

ಶ್ರೀ ಬಿ. ಸತ್ಯನಾರಾಯಣ್.—ಮೊದಲನೆ ಸಲ ಟೆಂಡರ್ ಕರೆದಾಗ, ೫-೧೦ ಪರ್ಸೆಂಟ್ ಮೇಲೆ ಬಂದಿದ್ದು ಬೋರ್ಡಿನ ಸೂಪರಿಂಟೆಂಡೆಂಟ್ ಇಂಜಿನಿಯರ್‌ರವರು ಲಂಚ ತೆಗೆದುಕೊಂಡು ಕಂಟ್ರಾಕ್ಟರ್‌ಗೆ ಫಿಕ್ಸ್ ಮಾಡುತ್ತಿದ್ದರು. ಆ ಇನ್‌ಫರ್‌ಮೇಷನ್ ತೀದು ಬೋರ್ಡಿಗೆ ಹೋಗಿ ಚೇರ್ಮನ್‌ರವರನ್ನು ಕಂಡು ಪ್ರತಿಭಟನೆ ಸಲ್ಲಿಸಿದ ನಂತರ ಪುನಃ ಎರಡನೇ ಸಾರಿ ಟೆಂಡರ್ ಕರೆದರು. ಸೂಪರಿಂಟೆಂಡಿಂಗ್ ಇಂಜಿನಿಯರ್‌ರವರು ಆಂದ್ರ ಸರ್ಕಾರದ ಮೇಲೆ ಪ್ರಭಾವ ಬೀರಿ ಗ್ರಾಂಟ್ ಬರದಂತೆ ಮಾಡಿದರೂ. ಇದರ ಬಗ್ಗೆ ಹೆಚ್ಚಿಗೆ ಪರಿಶೀಲನೆ ಮಾಡಿ ತನಿಖೆ ಮಾಡುತ್ತೀರಾ?